# ‘ನೆಗೆಟಿವ್’ ಅಂದ್ರೆ ‘ವಿಲನ್’ ಆಗಬೇಕು



**ಪಲ್ಲವಿ ಮತ್ತಿಘಟ್ಟ**
ಉದಯದ ‘ಬ್ರಹ್ಮಾಸ್ತ್ರ’ದ ಪ್ರಿಯಾ

**❖ ನಟನೆ ಹಿಂದಿನ ತಾಲೀಮು ಹೇಗಿತ್ತು?**

ಮೂಲತಃ ಯಕ್ಷಗಾನ ಕಲಾವಿದೆ. ನಮ್ಮೂರು ಶಿರಸಿ ತಾಲ್ಲೂಕಿನ ಮತ್ತಿಘಟ್ಟ. ಅವಕಾಶ ಸಿಕ್ಕರೆ ಕ್ಯಾಮೆರಾ ಎದುರಿಸುವ ಕನಸಿತ್ತು. ನಿರ್ದೇಶಕ ಸಕ್ರೆಬೈಲು ಶ್ರೀನಿವಾಸ್ ಪರಿಚಯವಿದ್ದರು. ಅವರು ‘ಆಕಾಶ ದೀಪ’ದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುವ ಜವಾಬ್ದಾರಿ ನೀಡಿದರು. ನನಗದು ಮೊದಲ ಧಾರಾವಾಹಿ ಆಗಿದ್ದರೂ ಮಹತ್ವದ ಪಾತ್ರ ನೀಡಿದ್ದರು. ನಂತರ ‘ಮಹಾಭಾರತ’ದಲ್ಲಿ ಸುಭದ್ರೆಯಾಗಿದ್ದೆ ‘ಮದುಮಗಳು’ನಲ್ಲಿ ನೆಗೆಟಿವ್ ಪಾತ್ರ ಮಾಡಿದ್ದೆ. ‘ರಂಗೇಗೌಡ’ದ ನಂತರ ವೈಯಕ್ತಿಕ ಕಾರಣಕ್ಕೆ ಸ್ವಲ್ಪ ಬಿಡುವು ತೆಗೆದುಕೊಂಡೆ. ಅಷ್ಟರಲ್ಲಿ ‘ಪರಮಶಿವ’ ಮತ್ತು ‘ಸೂಪರ್ ರಂಗ’ ಸಿನಿಮಾಗಳಲ್ಲಿಯೂ ನಟಿಸಿದ್ದೆ. ಮತ್ತೆ ಈಗ ರವಿ ಗರಣಿಯವರ ‘ಬ್ರಹ್ಮಾಸ್ತ್ರ’ದ ಮೂಲಕ ಮರುಪ್ರವೇಶ ಮಾಡುತ್ತಿದ್ದೇನೆ.

**❖ ವೃತ್ತಿಯಾಗಿ ಯಕ್ಷಗಾನ ಯಶಸ್ವಿ ಆಗಬಹುದೇ?**

ವೃತ್ತಿಯಾಗಿ ಅದನ್ನು ಸ್ವೀಕರಿಸುವುದು ಕಷ್ಟವಾಗುತ್ತದೆ. ಮನೆಕಡೆ ಅನುಕೂಲತೆ ಇದ್ದರೆ ಅಡ್ಡಿಯಿಲ್ಲ. ಕುಟುಂಬದ ಜವಾಬ್ದಾರಿ ಇರುವ ಪುರುಷರಿಗೆ ತುಂಬಾ ಕಷ್ಟ ಆಗಬಹುದು ಎನ್ನುವುದು ನನ್ನ ವೈಯಕ್ತಿಕ ಅನಿಸಿಕೆ. ಅಷ್ಟು ಮಾತ್ರ ಅಲ್ಲದೆ ಜನಪ್ರಿಯತೆ ಕಡಿಮೆ ಇದ್ದೇ ಇರುತ್ತದೆ. ಎಂತಹ ಅಭೂತಪೂರ್ವ ಆಟವನ್ನು ಆಡಿದರೂ ಸೀಮಿತ ವಲಯವನ್ನು ಮಾತ್ರ ತಲುಪಲು ಸಾಧ್ಯವಾಗುತ್ತದೆ. ತೆರೆಯ ಮೇಲಾದರೆ ವಿಸ್ತಾರ ದೊಡ್ಡದಿರುತ್ತದೆ. ಹೆಚ್ಚು ಜನರನ್ನು ತಲುಪಬಹುದು.

**❖ ಪ್ರಿಯಾ ಪಾತ್ರ ಎಂತಹದ್ದು?**

ಅವಿಭಕ್ತ ಕುಟುಂಬದ ಆದರ್ಶ ಸೊಸೆಯ ಪಾತ್ರ. ಕುಟುಂಬದಲ್ಲಿ ಸಾಮರಸ್ಯವನ್ನೂ ಪರಸ್ಪರರ ಪ್ರೀತಿ, ವಿಶ್ವಾಸವನ್ನು ಗಟ್ಟಿಗೊಳಿಸುವಂತಹದ್ದು. ಇಲ್ಲಿ ಮೈದುನ ಮತ್ತು ನಾದಿನಿ ತಂದೆ, ತಾಯಿಯ ಬಳಿ ಹೇಳಿಕೊಳ್ಳಲಾಗದ ತಮ್ಮ ತುಮುಲಗಳನ್ನು ನನ್ನ ಬಳಿ ಹೇಳುತ್ತಾರೆ. ಇಲ್ಲಿ ಅತ್ಯಾಪ್ತ ಸ್ನೇಹದ ಭಾವಸೇತುವಾಗಿ ಎಲ್ಲರನ್ನೂ ಒಂದಾಗಿಸುವಂತೆ ಕಥೆ ನಿರೂಪಣೆಯಾಗಿದೆ. ಕುಟುಂಬದ ಎಲ್ಲಾ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದೇನೆ.

ಮೈದುನ ಕಥೆಯ ನಾಯಕ. ಆದರೆ ಇಲ್ಲಿ ಅತ್ತಿಗೆಯಾದ ನನ್ನ ಪಾತ್ರಕ್ಕೂ ಅಷ್ಟೇ ಮಹತ್ವವನ್ನು ನೀಡಲಾಗಿದೆ.

**❖ ನಿಮಗೆ ಯಾವ ರೀತಿಯ ಪಾತ್ರ ಇಷ್ಟ?**

ಎಲ್ಲಾ ರೀತಿಯ ಪಾತ್ರಗಳೂ ಇಷ್ಟವೇ. ನಾಯಕಿ ಪಾತ್ರವೇ ಇರಲಿ ಯಾವುದೇ ಆಗಿರಲಿ ಅದು ಜೀವಂತವಾಗಿರಬೇಕು. ಸವಾಲಿನಿಂದ ಕೂಡಿರಬೇಕು. ಪಾತ್ರ ಒಂದೇ ಆಗಿದ್ದರೂ ಅದು ಹತ್ತಾರು ಭಾವನೆಗಳನ್ನು ವೀಕ್ಷಕರಲ್ಲಿ ಹುಟ್ಟಿಸುತ್ತದೆ. ಪಾತ್ರದ ಗುಣವಿಶೇಷಣ ಹೇಗಿದ್ದರೂ ತೊಂದರೆ ಇಲ್ಲ. ಪಾತ್ರ ಬಬ್ಲಿ ಬಬ್ಲಿ ಆಗಿದ್ದರೂ ಅಡ್ಡಿಯಿಲ್ಲ. ನೆಗೆಟಿವ್ ಪಾತ್ರದಲ್ಲಿ ಮಾತ್ರ ನನಗೆ ಹೀಗೆ ಇರಬೇಕು ಎನ್ನುವ ಷರತ್ತುಗಳಿವೆ. ಚಿಕ್ಕಪುಟ್ಟ ಸಂಗತಿಯನ್ನೇ ಎಳೆದಾಡುವ ಕಿಚನ್ ಕಿಲಾಡಿತನದ ನೆಗೆಟಿವ್ ಪಾತ್ರ ಇಷ್ಟ ಆಗಲ್ಲ. ಅದು ಜಗಳಗಂಟಿತನಕ್ಕಷ್ಟೇ ಸೀಮಿತವಾಗುತ್ತದೆ. ಕಥೆಗೊಂದು ತಿರುವನ್ನು ನೀಡುವ, ಕಥೆಯ ಕೇಂದ್ರವನ್ನು ಒಳಗೊಳ್ಳುವ ವಿಲನ್ ಪಾತ್ರ ನನಗೆ ಚಂದ ಅನ್ನಿಸುತ್ತದೆ.

■ **ರಾಘವೇಂದ್ರ**